| ಕೆ.ಪಿ.ಟಿ.ಸಿ.ಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಮುಂಗಾರು ಮುಂಚಿತ ಕಾರ್ಯಸಿದ್ಧತೆಯ (Pre-Monsoon Preparedness) ಕುರಿತು ದಿನಾಂಕ 21-05-2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ, ಕೊಠಡಿ ಸಂಖ್ಯೆ 236, ವಿಕಾಸ ಸೌಧ, ಬೆಂಗಳೂರು, ಇಲ್ಲಿ Video Conference ಮೂಲಕ ನಡೆದ ಸಭೆಯ ನಡವಳಿಗಳು. | 2021 |
|---|---|

ಅಪರ ಮುಖ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿದರು.

ಪ್ರಸ್ತುತ ಉಂಟಾಗಿರುವ ಚಂಡಮಾರುತದ ಪರಿಸ್ಥಿತಿ ಮತ್ತು ಪ್ರಾರಂಭವಾಗಲಿರುವ ಮುಂಗಾರು ಋತುಮಾನದಿಂದ ಮಳೆ ಮತ್ತು ಪ್ರವಾಹ ಉಂಟಾಗಿ, ವಿದ್ಯುತ್ ಜಾಲದ ಮೇಲಾಗುವ ಪರಿಣಾಮಗಳನ್ನು ನಿಭಾಯಿಸಲು ಮತ್ತು ವಿದ್ಯುಚ್ಛಕ್ತಿ ವಿತರಣೆಯ ನಿರಂತರತೆಯ ಖಾತ್ರಿಯ ಬಗ್ಗೆ ಕೆ.ಪಿ.ಟಿ.ಸಿ.ಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಕೈಗೊಂಡಿರುವ ಹಾಗೂ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸುವ ಮೊದಲು ಅಪರ ಮುಖ್ಯ ಕಾರ್ಯದರ್ಶಿಯವರು ವಿದ್ಯುತ್ ಕ್ಷೇತ್ರದ ಮೇಲೆ ಆಗಬಹುದಾದ ಪರಿಣಾಮಗಳ ವಿವರಣೆಯನ್ನು ಸಮಗ್ರವಾಗಿ ನೀಡಿ, ವಿದ್ಯುತ್ ಕಂಪನಿಗಳು ಯಾವ ರೀತಿಯಲ್ಲಿ ಈ ಸಮಸ್ಯೆಯನ್ನು ಸೂಕ್ತವಾಗಿ ಎದುರಿಸಲು ಸಶಕ್ತರಾಗಿರಬೇಕೆಂದು ತಿಳಿಸುತ್ತಾ, ಕೆ.ಪಿ.ಟಿ.ಸಿ.ಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಕೈಗೊಂಡಿರುವ ಸಿದ್ಧತಾ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ಚರ್ಚಿಸಿದರು.

**I. ಕೆ.ಪಿ.ಟಿ.ಸಿ.ಎಲ್ ನಲ್ಲಿ ಕೈಗೊಂಡಿರುವ ಪೂರ್ವ-ಮುಂಗಾರು ಸಿದ್ಧತೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್ ರವರು ಈ ಕೆಳಕಂಡ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.**

1) ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯು ಮುಂಗಾರಿಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಕೈಗೊಂಡಿದ್ದು, ವಿಪತ್ತು ನಿರ್ವಹಣೆಗೆ ಬೇಕಾಗಬಹುದಾದ ವಿವಿಧ ವೋಲ್ಟೇಜ್ ವರ್ಗದ ಪ್ರಸರಣ ಗೋಪುರ ಭಾಗಗಳು, CT, PT, Insulator ಇತ್ಯಾದಿಗಳ ದಾಸ್ತಾನನ್ನು ಹೊಂದಿರುತ್ತದೆ ಎಂದು ತಿಳಿಸಿದರು.
2) ಕಳೆದ 2 ವರ್ಷಗಳಲ್ಲಿ ಕಲಬುರ್ಗಿ ಮತ್ತು ಬಾಗಲಕೋಟೆ ಪ್ರಸರಣ ವಲಯ ವ್ಯಾಪ್ತಿಯಲ್ಲಿ ಪ್ರವಾಹದಿಂದ ಗೋಪುರಗಳು ಕುಸಿದಿದ್ದು, ಕರಾವಳಿ ಪ್ರದೇಶಗಳಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಉಂಟಾಗಿರುವುದಿಲ್ಲವೆಂದು ತಿಳಿಸಿದರು.
3) ಬೆಂಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ತಲಾ 2 ಉಪಕೇಂದ್ರಗಳು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 3 ಉಪಕೇಂದ್ರಗಳು ತಗ್ಗು ಪ್ರದೇಶಗಳಲ್ಲಿರುವುದರಿಂದ ಪ್ರವಾಹದ ಸಮಯದಲ್ಲಿ ಜಲಾವೃತಗೊಳ್ಳುವ ಸಾಧ್ಯತೆಗಳಿರುತ್ತದೆ. ಬೆಂಗಳೂರಿನಲ್ಲಿರುವ 2 ಉಪಕೇಂದ್ರಗಳು ಜಲಾವೃತಗೊಂಡಲ್ಲಿ, ತಾತ್ಕಾಲಿಕ ಕ್ರಮವನ್ನು ಈಗಾಗಲೇ ಅನುಷ್ಠಾನಗೊಳಿಸಿದ್ದು, ಉಳಿದ ಉಪಕೇಂದ್ರಗಳಲ್ಲಿ ತಾತ್ಕಾಲಿಕ ನೀರು ಎತ್ತುವ ಸೌಲಭ್ಯವನ್ನು

ಕಲ್ಪಿಸಲಾಗುತ್ತಿದ್ದು, ಮುಂದಿನ 2 ದಿನಗಳಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

4) ಬೆಂಗಳೂರಿನಲ್ಲಿ 12 ಉಪಕೇಂದ್ರಗಳು, ಹಾಸನದಲ್ಲಿ 59 ಉಪಕೇಂದ್ರಗಳು ಮತ್ತು ಕಲಬುರ್ಗಿಯಲ್ಲಿ 9 ಉಪಕೇಂದ್ರಗಳಿಗೆ Radial Source ಮಾತ್ರ ಲಭ್ಯವಿದ್ದು, ಪರ್ಯಾಯ ಸಂಪರ್ಕವನ್ನು ಕಲ್ಪಿಸಲು ಯೋಜಿಸಲಾಗುತ್ತಿದೆ.

**II. ಬೆಸ್ಕಾಂ ನಲ್ಲಿ ಕೈಗೊಂಡಿರುವ ಪೂರ್ವ-ಮುಂಗಾರು ಸಿದ್ಧತೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ರವರು ಈ ಕೆಳಕಂಡ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.**

1) ಬೆಸ್ಕಾಂ ನಲ್ಲಿ ಈಗಾಗಲೇ ಮುಂಗಾರು ಆಕಸ್ಮಿಕ ಯೋಜನೆಗೆ ಸಂಬಂಧಿಸಿದಂತೆ ಸುತ್ತೋಲೆಯನ್ನು ಹೊರಡಿಸಿ, ವಿದ್ಯುತ್ ಮಾರ್ಗದ ಸಾಮಗ್ರಿಗಳು, ಮಾನವ ಸಂಪನ್ಮೂಲ ಮತ್ತು ಆರ್ಥಿಕ ಅಧಿಕಾರಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

2) **ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯನ್ನು ಕಡಿಮೆ ಮಾಡಲು ಬಹತೇಕ ಪ್ರದೇಶಗಳಲ್ಲಿ 11ಕೆ.ವಿ changeover ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಪ್ರಸ್ತುತ ಕೋವಿಡ್ ಲಾಕ್ಡೌನ್ ನಿಂದ ಪೂರ್ವ-ಮುಂಗಾರು ನಿರ್ವಹಣೆಯನ್ನು ಸಂಪೂರ್ಣವಾಗಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದರು.**

3) ಪ್ರಸ್ತುತ, ಬೆಸ್ಕಾಂ ಸಹಾಯವಾಣಿ 1912 ದಲ್ಲಿನ ಕೆಲವು ಮಾರ್ಗಗಳನ್ನು ಕೋವಿಡ್ ಸಹಾಯವಾಣಿಗೆ ಬಳಕೆಯಾಗಿತ್ತಿರುವುದರಿಂದ ಹೆಚ್ಚುವರಿಯಾಗಿ 30 ಮಾರ್ಗಗಳನ್ನು ಸೇರ್ಪಡೆಗೊಳಿಸಿ, ಗ್ರಾಹಕ ದೂರುಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ತಿಳಿಸಿದರು.

4) ಇದಲ್ಲದೇ, ಸಾಕಷ್ಟು ಪ್ರಮಾಣದ ವಿತರಣಾ ಸಾಮಗ್ರಗಳನ್ನು ದಾಸ್ತಾನು ಹೊಂದಿರುವುದಾಗಿ ತಿಳಿಸಿದರು.

**III. ಮೆಸ್ಕಾಂ ನಲ್ಲಿ ಕೈಗೊಂಡಿರುವ ಪೂರ್ವ-ಮುಂಗಾರು ಸಿದ್ಧತೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ ರವರು ಈ ಕೆಳಕಂಡ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.**

1) ಮೆಸ್ಕಾಂ ವ್ಯಾಪ್ತಿಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ 3 ದಿನಗಳಿಂದ ಮಳೆಯಾಗುತ್ತಿದ್ದು, ವಿದ್ಯುತ್ ಅಡಚಣೆಯಾದಲ್ಲಿ, ಮರು ಸಂಪರ್ಕವನ್ನು ಕಲ್ಪಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿರುವುದಾಗಿ ತಿಳಿಸಿದರು.

2) ಮೆಸ್ಕಾಂ ನಲ್ಲಿ 1912 ಸಹಾಯವಾಣಿ ಕಾರ್ಯನಿರ್ವಹಿಸುತ್ತಿದ್ದು, ಇತರೆ ಮೂಲಗಳಿಂದಲೂ ಸಹ ದೂರುಗಳನ್ನು ಸ್ವೀಕರಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

3) ಮುಂಗಾರು ಸಿದ್ಧತೆಗೆ ಸಾಮಗ್ರಿಗಳನ್ನು ಹೊಂದಿದ್ದು, ಈಗಾಗಲೇ ಸುಮಾರು 600 ಸಿಬ್ಬಂದಿಗಳು ಹಾಗೂ 50 ವಾಹನಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

**IV. ಹೆಸ್ಕಾಂ ನಲ್ಲಿ ಕೈಗೊಂಡಿರುವ ಪೂರ್ವ-ಮುಂಗಾರು ಸಿದ್ಧತೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ ರವರು ಈ ಕೆಳಕಂಡ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.**

1) ಹೆಸ್ಕಾಂ ವ್ಯಾಪ್ತಿಯಲ್ಲಿ ಈ ಹಿಂದೆ ಉತ್ತರ ಕನ್ನಡ, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೆಚ್ಚಾಗಿ ಮಳೆ ಮತ್ತು ಪ್ರವಾಹದಿಂದ ವಿದ್ಯುತ್ ಮೂಲಸೌಕರ್ಯಕ್ಕೆ ಹಾನಿಯಾಗಿರುವುದಾಗಿ ತಿಳಿಸಿದರು.

2) ಪ್ರಸ್ತುತ, ಕೋವಿಡ್-19 ಹರಡುತ್ತಿರುವುದರಿಂದ, 1912 ಸಹಾಯವಾಣಿಯಲ್ಲಿ ಎರಡು ಪಾಳಿಗಳಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

3) ಮುಂಗಾರು ಸೂಕ್ಷ್ಮ ಪ್ರದೇಶಗಳಿಗೆ ಹೆಚ್ಚಿನ ಸಿಬ್ಬಂದಿ, ವಾಹನ ಮತ್ತು ಸಾಮಗ್ರಗಳನ್ನು ಒದಗಿಸಿರುವುದಾಗಿ ತಿಳಿಸಿದರು.

4) ಹಾಲಿ ಕರಾವಳಿ ಪ್ರದೇಶದಲ್ಲಿ ಉಂಟಾಗಿರುವ ಚಂಡಮಾರುತದ ಪ್ರಯುಕ್ತ, ಗೋವಾ ರಾಜ್ಯದ ಕೋರಿಕೆಯ ಮೇಲೆ, ಹೆಸ್ಕಾಂ ವತಿಯಿಂದ ಈಗಾಗಲೇ 60 ಸಿಬ್ಬಂದಿಗಳನ್ನು ಹಾಗೂ 5 ನೋಡಲ್/ಮೇಲ್ವಿಚಾರಣಾಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

**V. ಜೆಸ್ಕಾಂ ನಲ್ಲಿ ಕೈಗೊಂಡಿರುವ ಪೂರ್ವ-ಮುಂಗಾರು ಸಿದ್ಧತೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ ರವರು ಈ ಕೆಳಕಂಡ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.**

1) ಜೆಸ್ಕಾಂ ನಲ್ಲಿ ಸಾಕಷ್ಟು ಪ್ರಮಾಣದ ವಿತರಣಾ ಸಾಮಗ್ರಗಳನ್ನು ದಾಸ್ತಾನು ಹೊಂದಿರುವುದಾಗಿ ತಿಳಿಸಿದ್ದು, ಆಕಸ್ಮಿಕ ಸಂದರ್ಭಗಳಲ್ಲಿ ಬಳಕೆ ಮಾಡಲು 5000 ಸಂಖ್ಯೆಯ ವಿದ್ಯುತ್ ಕಂಬಗಳನ್ನು ಮತ್ತು 500 ಸಂಖ್ಯೆಯ ವಿತರಣಾ ಪರಿವರ್ತಕಗಳನ್ನು ದಾಸ್ತಾನು ಇಡಲಾಗಿದೆ ಎಂದು ತಿಳಿಸಿದರು.

2) 1912 ಸಹಾಯವಾಣಿಯು ಚಾಲ್ತಿಯಲ್ಲಿದ್ದು, ಹೆಚ್ಚುವರಿ ಮಾರ್ಗಗಳನ್ನು ಸೇರ್ಪಡೆಗೊಳಿಸುವ ಕಾರ್ಯವು ಪ್ರಗತಿಯಲ್ಲಿರುವುದಾಗಿ ತಿಳಿಸಿದರು.

3) ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿರುವುದರಿಂದ, ವಿತರಣಾ ಜಾಲದ ನಿರ್ವಹಣೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.

**VI. ಸೆಸ್ಕ್ ನಲ್ಲಿ ಕೈಗೊಂಡಿರುವ ಪೂರ್ವ ಮುಂಗಾರು ಸಿದ್ಧತೆಗೆ ಸಂಬಂಧಿಸಿದಂತೆ ನಿರ್ದೇಶಕರು (ತಾಂತ್ರಿಕ), ಸೆಸ್ಕ್ ರವರು ಈ ಕೆಳಕಂಡ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.**

1) ಕಳೆದ 2 ವರ್ಷಗಳಲ್ಲಿ ಸೆಸ್ಕ್ ವ್ಯಾಪ್ತಿಯ ಕೊಡಗು ಜಿಲ್ಲೆಯಲ್ಲಿ ಮಳೆ/ಪ್ರವಾಹದಿಂದ ಹೆಚ್ಚು ಹಾನಿಯಾಗುತ್ತಿರುವುದಾಗಿ ತಿಳಿಸಿದರು.
2) ಸೆಸ್ಕ್ ನಲ್ಲಿ ಸಾಕಷ್ಟು ಪ್ರಮಾಣದ ವಿತರಣಾ ಸಾಮಗ್ರಗಳನ್ನು ದಾಸ್ತಾನು ಹೊಂದಿರುವುದಾಗಿ ತಿಳಿಸಿದ್ದು, ಅಗತ್ಯವಿರುವ ಸಿಬ್ಬಂದಿ ಮತ್ತು ವಾಹನಗಳನ್ನು ಒದಗಿಸಿರುವುದಾಗಿ ತಿಳಿಸಿದರು.
3) ಆಮ್ಲಜನಕ ಘಟಕಗಳಿಗೆ ವಿದ್ಯುತ್ ಅಡಚಣೆ ಉಂಟಾಗದಂತೆ ಕ್ರಮ ವಹಿಸಲಾಗಿದ್ದು, ನೋಡಲ್ ಅಧಿಕಾರಿಗಳನ್ನು ನೇಮಿಸಿರುವುದಾಗಿ ತಿಳಿಸಿದರು.
4) 1912 ಸಹಾಯವಾಣಿಯು ಚಾಲ್ತಿಯಲ್ಲಿರುವುದಾಗಿ ತಿಳಿಸಿದರು.
5) ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಪ್ರಸರಣವು Radial mode ನಲ್ಲಿರುವುದರಿಂದ ಕೆ.ಪಿ.ಟಿ.ಸಿ.ಎಲ್ ರವರೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಪೂರ್ವ-ಮುಂಗಾರು ಮತ್ತು ಮಳೆ/ಪ್ರವಾಹ ಕಾಲದಲ್ಲಿ ನಡೆಸಬೇಕಾದ ಕಾರ್ಯಚರಣೆಯ ಬಗ್ಗೆ ಸುದೀರ್ಘ ಚರ್ಚೆಯ ನಂತರ ಅಪರ ಮುಖ್ಯ ಕಾರ್ಯದರ್ಶಿಯವರು ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು.**

1) ಕೆ.ಪಿ.ಟಿ.ಸಿ.ಎಲ್ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಜಾಲದ ಪೂರ್ವ-ಮುಂಗಾರು ನಿರ್ವಹಣೆಯನ್ನು ಆದ್ಯತೆ ಮೇಲೆ ಹಾಗೂ ಪರಿಣಾಮಕಾರಿಯಾಗಿ ಕೈಗೊಳ್ಳುವುದು.
2) ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಪ್ರಸರಣ)/(ತಾಂತ್ರಿಕ) ಮತ್ತು ಎಲ್ಲಾ ಸಂಬಂಧಿತ ಅಧಿಕಾರಿಗಳು ಮುಂಗಾರು ಸಮಯದಲ್ಲಿ ವಿದ್ಯುತ್ ಜಾಲವನ್ನು ಸುಸ್ಥಿತಿಯಲ್ಲಿರುವುದನ್ನು ಖಾತರಿಪಡಿಕೊಳ್ಳಲು ಎಲ್ಲಾ ಹಂತಗಳಲ್ಲಿ ಪರಿಣಾಮಕಾರಿಯಾಗಿ ಸಂವಹನ ಸಾಧಿಸಿ, ತುರ್ತಾಗಿ ಕಾರ್ಯವನ್ನು ಪೂರ್ಣಗೊಳಿಸುವುದು.

3) ಪ್ರಸ್ತುತ, ಗುಜರಾತ ರಾಜ್ಯವು ಚಂಡಮಾರುತದಿಂದಾಗಿ, ವಿದ್ಯುತ್ ಪ್ರಸರಣದಲ್ಲಿ ವ್ಯತ್ಯಯವಾಗಿರುವುದನ್ನು ಉಲ್ಲೇಖಿಸಿ, 66ಕೆ.ವಿ ಸಾಮರ್ಥ್ಯದ ಪ್ರಸರಣ ಸಾಮಗ್ರಗಳ ಪೂರೈಕೆಗೆ ಕರ್ನಾಟಕ ರಾಜ್ಯವನ್ನು ಕೋರಿದ್ದು, ಗುಜರಾತ ರಾಜ್ಯದ ನೋಡಲ್ ಅಧಿಕಾರಿಯನ್ನು ಸಂಪರ್ಕಿಸಿ, ಕೆ.ಪಿ.ಟಿ.ಸಿ.ಎಲ್ ನಲ್ಲಿ ಹಾಲಿ ದಾಸ್ತಾನು ಇರುವ ಪ್ರಸರಣ ಸಾಮಗ್ರಿಗಳಲ್ಲಿ ಗುಜರಾತ ರಾಜ್ಯಕ್ಕೆ ನೀಡಬಹುದಾದ ಪ್ರಮಾಣದ ಕುರಿತು ಚರ್ಚಿಸಿ, ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್ ರವರು ಕ್ರಮ ವಹಿಸುವುದು.

4) ವಿದ್ಯುತ್ ಜಾಲದ ನಿರ್ವಹಣೆಗೆ ಅಗತ್ಯವಿರುವ ಸಾಮಗ್ರಿಗಳು ಮತ್ತು ಸುರಕ್ಷತಾ ಉಪಕರಣಗಳನ್ನು ದಾಸ್ತಾನಿಗಿಂತಲೂ ಮಿಗಿಲಾಗಿ ಸಾಮಗ್ರಿಗಳು ಬೇಕಿದ್ದಲ್ಲಿ, ಸಂಗ್ರಹಣೆಗೆ ಕ್ರಮ ವಹಿಸುವುದು ಹಾಗೂ ವಾಹನಗಳು ಮತ್ತು ದೂರವಾಣಿ/ಮೊಬೈಲ್ ಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು, ಸದಾಕಾಲ ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

5) ಕೆ.ಪಿ.ಟಿ.ಸಿ.ಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಮುಂಗಾರು ಸೂಕ್ಷ್ಮ ಪ್ರದೇಶಗಳು, ಸೂಕ್ಷ್ಮ ಸ್ಥಾವರಗಳು ಮತ್ತು ಪ್ರಸರಣ ಮಾರ್ಗಗಳು ಇತ್ಯಾದಿಗಳನ್ನು ಆದ್ಯತೆ ಮೇಲೆ ಗುರುತಿಸಿ, ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.

6) ಆಸ್ಪತ್ರೆಗಳು, ಆಮ್ಲಜನಕ ಘಟಕಗಳು, ಕೋವಿಡ್ ಆರೈಕೆ ಕೇಂದ್ರಗಳಿಗೆ, ಕೋವಿಡ್ ಲಸಿಕಾ ಕೇಂದ್ರಗಳು ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲು ಕ್ರಮ ವಹಿಸಿ, ವಿದ್ಯುತ್ ಪೂರೈಕೆಯ ಕುರಿತು ದಿನವಹಿ ಮೇಲ್ವಿಚಾರಣೆ ನಡೆಸಿ, ವಿದ್ಯುತ್ ಅಡಚಣೆಯನ್ನು ತಪ್ಪಿಸಲು ಎಲ್ಲಾ ರೀತಿಯ ಸಿದ್ಧತಾ ಕ್ರಮಗಳನ್ನು ಕೈಗೊಳ್ಳುವುದು.

7) Radial Source ಮಾತ್ರ ಲಭ್ಯವಿರುವ ಉಪಕೇಂದ್ರಗಳಿಂದ ಹೊರ ಹೋಗುವ 11ಕೆ.ವಿ ವಿದ್ಯುತ್ ಮಾರ್ಗಗಳಡಿ ಆಸ್ಪತ್ರೆಗಳು, ಕೋವಿಡ್ ಆರೈಕೆ ಕೇಂದ್ರಗಳು ಹಾಗೂ ಆಮ್ಲಜನಕ ಘಟಕಗಳು ಇದ್ದಲ್ಲಿ, ಅಂತಹ ಸೂಕ್ಷ್ಮ ಸ್ಥಾವರಗಳನ್ನು ಗುರುತಿಸಿ, ವಿದ್ಯುತ್ ಅಡಚಣೆ ಉಂಟಾದಲ್ಲಿ, ಹತ್ತಿರದಲ್ಲಿ ಲಭ್ಯವಿರುವ 11ಕೆ.ವಿ ಮಾರ್ಗಗಳಿಂದ ಪರ್ಯಾಯ ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮ ವಹಿಸುವುದು.

8) ಬೆಂಗಳೂರು ನಗರದಲ್ಲಿರುವ ಸೂಕ್ಷ್ಮ ಸ್ಥಾವರಗಳನ್ನು ಗುರುತಿಸಿ, ಪಟ್ಟಿ ಮಾಡಿ, ಅವುಗಳಿಗೆ 24x7 ವಿದ್ಯುತ್ ಪೂರೈಕೆ ಮಾಡಲು ಕ್ರಮಗಳನ್ನು ವಹಿಸುವುದು ಹಾಗೂ ಅಂತಹ ಸ್ಥಾವರಗಳ ವಿದ್ಯುತ್ ಪೂರೈಕೆಯನ್ನು

ಮೇಲ್ವಿಚಾರಣೆ ನಡೆಸಲು ನೋಡಲ್ ಅಧಿಕಾರಿಯನ್ನು ನೇಮಿಸುವುದು. ಒಂದು ವೇಳೆ ಈ ಸೂಕ್ಷ್ಮ ಸ್ಥಾವರಗಳಿಗೆ ವಿದ್ಯುತ್ ಅಡಚಣೆ ಉಂಟಾದಲ್ಲಿ, ವಿದ್ಯುತ್ ಸಂಪರ್ಕವನ್ನು ಮರು ಕಲ್ಪಿಸಲು ಕೂಡಲೇ ಕ್ರಮ ವಹಿಸುವುದು ಹಾಗೂ ಪರ್ಯಾಯ ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸುವ ಕುರಿತು ಪರಿಶೀಲಿಸಿ, ಕ್ರಮ ವಹಿಸುವುದು.

9) ಮಳೆ ಮತ್ತು ಪ್ರವಾಹದ ಸಂದರ್ಭದಲ್ಲಿ ಹಾನಿಯಾಗುವ ಮೂಲಸೌಕರ್ಯವನ್ನು ಪುನರ್ ನಿರ್ಮಾಣ ಮಾಡಲು ಸಿಬ್ಬಂದಿ ಮತ್ತು ಸಾಮಗ್ರಗಳನ್ನು ದಾಸ್ತಾನು ಇಡಲು ಕ್ರಮ ವಹಿಸುವುದು. ಒಂದು ವೇಳೆ ಇತರೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಸಿಬ್ಬಂದಿಗಳನ್ನು ನಿಯೋಜಿಸಿದಲ್ಲಿ, ಅವರಿಗೆ ಸೂಕ್ತವಾದ ತಂಗುವ ಮತ್ತು ಇತರೆ ವ್ಯವಸ್ಥೆಯನ್ನು ಮಾಡುವುದರೊಂದಿಗೆ ಅವರಿಂದ ಕಾರ್ಯವನ್ನು ಯೋಜಿತ ರೀತಿಯಲ್ಲಿ ಕೈಗೊಳ್ಳುವುದು.

10) ಮುಂಗಾರು ಸಮಯದಲ್ಲಿ ವಿದ್ಯುತ್ ಮಾರ್ಗಗಳಿಂದ ಅಪಘಾತಗಳು ಜರುಗುವ ಸನ್ನಿವೇಶಗಳ ಬಗ್ಗೆ ಹಾಗೂ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.

11) 1912 ಸಹಾಯವಾಣಿಯನ್ನು ಎಲ್ಲಾ ಸಮಯದಲ್ಲಿಯೂ ಚಾಲನೆಯಲ್ಲಿಡುವುದು ಹಾಗೂ ಎಲ್ಲಾ ಸಂಬಂಧಿತ ಕ್ಷೇತ್ರೀಯ ಅಧಿಕಾರಿಗಳಿಗೆ ಕೇಂದ್ರ ಸ್ಥಾನದಲ್ಲಿಯೇ ಕಾರ್ಯನಿರ್ವಹಿಸಲು ಸೂಚಿಸಿ, ಮೊಬೈಲ್ ಗಳನ್ನು ಚಾಲನೆಯಲ್ಲಿಟ್ಟುಕೊಂಡು, ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

12) ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿಗಳು (ಪವರ್ ಮ್ಯಾನ್) ನಿಯೋಜಿಸಿರುವ ಕ್ಯಾಂಪ್ ಗಳಲ್ಲಿ ಎಲ್ಲಾ ಸಮಯದಲ್ಲಿಯೂ ಲಭ್ಯವಿರುವಂತೆ ಸೂಚಿಸಿ, ಅವರಿಂದ ಕೆಲಸ ನಿರ್ವಹಣೆಯಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

13) ಕೋವಿಡ್ ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನೆಲೆಯಲ್ಲಿ, ವಿದ್ಯುತ್ ವ್ಯವಸ್ಥೆಯ ದೈನಂದಿನ ಕಾರ್ಯ ಚಟುವಟಿಕೆಗಳು ಸುಗಮವಾಗಿ ನಡೆಯಲು ಎಲ್ಲಾ ರೀತಿಯ ಪರ್ಯಾಯ ವ್ಯವಸ್ಥೆಯನ್ನು ಕೈಗೊಳ್ಳಲು ಕ್ರಮ ವಹಿಸುವುದು.

14) ಕಂದಾಯ ಇಲಾಖೆಯಿಂದ ಮುಂಗಾರು ಋತುವಿನಲ್ಲಿ ಕೈಗೊಳ್ಳಬೇಕಾದ ಪೂರ್ವ ಸಿದ್ಧತೆ ಹಾಗೂ ವಿಪತ್ತು ನಿರ್ವಹಣೆ ಕಾರ್ಯಸೂಚಿಯನ್ನು ಹೊರಡಿಸಲಾಗಿದ್ದು (ಪ್ರತಿ ಲಗತ್ತಿಸಿದೆ), ಕಾರ್ಯಸೂಚಿಯಲ್ಲಿ ತಿಳಿಸಿರುವ

ಅಂಶಗಳನ್ನೂ ಸಹ ಪರಿಗಣನೆಗೆ ತೆಗೆದುಕೊಂಡು, ವಿದ್ಯುತ್ ಕ್ಷೇತ್ರದ ನಿರಂತರ ಸೇವೆಯನ್ನು ಒದಗಿಸುವ ಬಗ್ಗೆ ಎಲ್ಲಾ ರೀತಿಯ ಮುನ್ನೆಚರಿಕೆ ಕ್ರಮಗಳನ್ನು ಕೈಗೊಳ್ಳುವುದು.

ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳನ್ನು ಅಪರ ಮುಖ್ಯ ಕಾರ್ಯದರ್ಶಿಯವರು ಅಭಿನಂದಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಜಿ. ಕುಮಾರ ನಾಯಕ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಇಂಧನ ಇಲಾಖೆ

**File No: ENERGY/ 436/VSC/2021-EMC-ENERGY SECRETARIAT**
**ದಿನಾಂಕ:21-05-2021**

**ಇವರಿಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ವಿಧಾನ ಸೌಧ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್/ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಹು.ಗ್ರಾ.ವಿ.ಸ.ಸಂ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6. ಕಛೇರಿ ಪ್ರತಿ.

ಸಭೆಯಲ್ಲಿ Video Conference ಮೂಲಕ ಹಾಜರಿದ್ದ ಅಧಿಕಾರಿಗಳು:

1) ಡಾ. ಎನ್. ಮಂಜುಳ, ಭಾ.ಆ.ಸೇ., : ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್

2) ಶ್ರೀ ಎಂ.ಬಿ ರಾಜೇಶ್ ಗೌಡ, ಭಾ.ಆ.ಸೇ., : ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ

3) ಶ್ರೀ ಪ್ರಶಾಂತ್ ಕುಮಾರ್ ವಿಶ್ರಾ, ಭಾ.ಆ.ಸೇ. : ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ

4) ಶ್ರೀಮತಿ ಡಿ. ಭಾರತಿ, ಭಾ.ಆ.ಸೇ. : ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ

5) ಶ್ರೀ ಪಾಂಡ್ವೆ ರಾಹುಲ್ ತುಕಾರಾಮ್, ಭಾ.ಆ.ಸೇ. : ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ

6) ಶ್ರೀ ಡಿ. ನಾಗಾರ್ಜುನ : ನಿರ್ದೇಶಕರು (ತಾಂತ್ರಿಕ), ಸೆಸ್ಕ್

ಮೆಮೋ: ಪ್ರವ್ಯ(ತಾ)/ಉಪ್ರವ್ಯ(ತಾ)/ಸಪ್ರವ್ಯ(ತಾ)-1/2021-22/ /ಟಪ್ಸ-303 ದಿನಾಂಕ: 24 MAY 2021

ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ ಹಾಸನ
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ & ಪಾ ವೃತ್ತ , ಚಾವಿಸನಿನಿ.
3. ಉಪಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್.). ನಿಗಮ ಕಚೇರಿ, ಚಾವಿಸನಿನಿ, ಮೈಸೂರು ರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
5. ಆಪ್ತ ಸಹಾಯಕರು ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು ನಿರ್ದೇಶಕರು (ತಾಂತ್ರಿಕ) ರವರ ಗಮನಕ್ಕೆ ಹಾಗೂ ವಿಷಯವನ್ನು ವ್ಯ.ನಿ/ ನಿ.(ತಾ) ರವರ ಗಮನಕ್ಕೆ ಸಲ್ಲಿಸಲು.

ಮುಖ್ಯ ಕಡತ/ ಕಛೇರಿ ಪ್ರತಿ

24/5/2021

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

**N.MANJUNATHA PRASAD I.A.S.,**
Principal Secretary to Government
ಎನ್. ಮಂಜುನಾಥ ಪ್ರಸಾದ್ ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ

Department of Revenue
ಕಂದಾಯ ಇಲಾಖೆ

ಅ.ಸ.ಪತ್ರ ಸಂಖ್ಯೆ: ಕಂಇ/217/ಟಿಎನ್‌ಆರ್/2021. ದಿನಾಂಕ : 13-05-2021

ಮಾನ್ಯರೇ,

ವಿಷಯ : 2020-21 ರ ಮುಂಗಾರು ಋತುವಿಗೆ ರಾಜ್ಯದಲ್ಲಿ ಕೈಗೊಳ್ಳಬೇಕಾದ ಪೂರ್ವ ಸಿದ್ಧತೆ ಹಾಗೂ ವಿಪತ್ತು ನಿರ್ವಹಣೆ ಕಾರ್ಯಸೂಚಿ (Advisory on South West Monsoon Preparedness) ಬಗ್ಗೆ.

*****

ಪ್ರತಿ ಸಾಲಿನಂತೆ, ಈ ಸಾಲಿನಲ್ಲೂ ಸಹ ಮುಂಗಾರು ಮಳೆ ಮೇ ಅಂತ್ಯಕ್ಕೆ ಅಥವಾ ಜೂನ್ ಮೊದಲಿಗೆ ರಾಜ್ಯದಲ್ಲಿ ಪ್ರಾರಂಭಗೊಳ್ಳಲಿದ್ದು, ಭಾರತೀಯ ಹವಾಮಾನ ಇಲಾಖೆ 2021 ರ ಮುಂಗಾರು ಮುನ್ಸೂಚನೆಯ ಅನ್ವಯ ರಾಜ್ಯದ ಕರಾವಳಿ, ಮಲೆನಾಡು, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಕೆಲವು ಭಾಗಗಳಲ್ಲಿ ವಾಡಿಕೆಯಷ್ಟು ಅಥವಾ ಅಧಿಕ ಮಳೆಯಾಗುವ ಸಾಧ್ಯತೆಯಿದೆ. ಇದರಿಂದ ರಾಜ್ಯದ ಕೆಲವು ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ಹಾಗೂ ಭೂಕುಸಿತದಂತಹ ವಿಪತ್ತುಗಳು ಸಂಭವಿಸಬಹುದಾಗಿರುವ ಸನ್ನಿವೇಶ ಎದುರಾಗಬಹುದು.

2021 ರ ಸಾಲಿನಲ್ಲಿ ಸಂಭವಿಸಬಹುದಾದ ಎಲ್ಲಾ ವಿಪತ್ತುಗಳನ್ನು ನಿರ್ವಹಣೆ ಮಾಡಿ ವಿಪತ್ತುಗಳಿಂದಾಗುವ ಅನಾಹುತಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ/ ಉಪಶಮನಗೊಳಿಸುವ ನಿಟ್ಟಿನಲ್ಲಿ ಪೂರ್ವಸಿದ್ಧತೆ, ತರಬೇತಿ, ಜಾಗೃತಿಗೊಳಿಸುವಿಕೆ ಮುಖ್ಯಪಾತ್ರ ವಹಿಸುತ್ತದೆ. ಈ ಸಂಬಂಧ ಪೂರ್ವಸಿದ್ಧತೆಗೆ ಬೇಕಾದ ಕಾರ್ಯಸೂಚಿ (South West Monsoon Preparedness) Advisoryಯನ್ನು ತಯಾರಿಸಿ ಈ ಪತ್ರಕ್ಕೆ ಲಗತ್ತಿಸಲಾಗಿದೆ. ಜಿಲ್ಲಾಡಳಿತವು, ಸದರಿ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸಿ ವಿಪತ್ತುಗಳಿಂದ ಉಂಟಾಗುವ ಅನಾಹುತಗಳನ್ನು ನಿಯಂತ್ರಿಸಲು ಕೈಗೊಂಡ ಕ್ರಮಗಳ ಬಗ್ಗೆ ಅನುಷ್ಠಾನಪಾಲನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ತಿಳಿಸಲಾಗಿದೆ.

ರಾಜ್ಯದಲ್ಲಿ ಪ್ರಸಕ್ತ ಅವಧಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ತಾಂಡವಾಡುತ್ತಿದ್ದು, ಪ್ರತಿ ನಿರ್ವಹಣೆ ಕಾರ್ಯಸೂಚಿಯಲ್ಲಿ ಕೋವಿಡ್ - 19 ಮಾರ್ಗಸೂಚಿ, ನಿಬಂಧನೆಗಳನ್ನು ಅನುಸರಿಸಿ ಕ್ರಿಯಾ ಯೋಜನೆಗಳನ್ನು ತಯಾರಿಸಲು ಸೂಚಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

13/5/2021

ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

5th Floor, 3rd Gate, M.S. Building,
Dr. B.R. Ambedkar Veedhi, Bengaluru-560 001
Tel: +91-08-22252731, 22032495
Fax: +91-08-22256384

5ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001
E-mail:prs.revenu@gmail.com

g. Repairs/under construction activity is well secured.
h. Water level gauges marked.
i. Inlet and outlet to tanks are cleared.
j. Watch and ward of weak embankments & stock piling of repair materials at vulnerable points. Guarding of weak embankments. All staff informed about the disasters, likely damages and effects.

### 4) ELECTRICITY DEPARTMENT

Restoration of power supply and making provision of power/electricity to hospitals, lifeline building, feeding centre.

**Advance Preparedness**

a. Clear definition of individual domain- who will do what?
b. Skill up-gradation training for the officers/supporting staffs.
c. Identify hazard prone zones. Formation of team & delegation of areas.
d. Plan for Emergency accommodation for officers & staff from outside area.
e. Equipment/machines etc. are in working condition.
f. Emergency fuel stored, vehicles including its batteries inspection & are in working condition.
g. List of alternative safe routes.
h. Important telephone/contact details available/
i. Pre-contact with suppliers(equipment).
j. Arrange disaster management took kit, at each Sub-station, comprising cable cutters, pulley, blocks, jungle knives, axes, crowbars, ropes, back saw, spanners and tents for crews.
k. Generate awareness on community level preparedness.

**Post Disaster Management**

a. Establish linkages with District control Rooms.

b. Deployment team with necessary equipment logistic support and authority as planned and establish communication links.

c. Switch of the power supply immediately avoid further damaged to fire and property during the time the disaster.

d. Immediately undertake inspection of power grids, barrage, high tension lines, tower, substations, transformers, insulators, poles, and other, high equipment and review extent of damage undertake restoration works.

e. Restore power supply and ensure uninterrupted power to all vital installation facilities and sites(relief camps, feeding centre, go down)

f. Recruit casual labours on an emergency basis for cleating damaged poles and salvage of important equipment and accessories.

g. Requisition off equipment etc as per the pre-contact with the suppliers.

h. Arrangement of alternative power/energy sources, as planned to operate hospital centre's and lifeline buildings (DM & Collector/ office/Dist. EOCs/police stations/BSNL Building etc.,

i. Regular reporting to higher authorities about the situation including expenditure statement etc.

j. In post operation phase, sit with the team, review situation, discuss problems, and suggest remedies, collect feedback etc to upgrade mitigation as well as action plans.

5) AGRICULTURE DEPARTMENT

Assist in assessment of damage to agriculture & farming community and help them to restart their agriculture/farming operations.

**Advance preparedness**

a. Identify hazard prone zones.

b. Skill up gradation training for the officers/supporting staff & volunteers.

c. Formation of team & delegation of areas,